1ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ

ನ್ಯಾಯಾಲಯ , ಚನ್ನಗಿರಿ .

ಸಿಸಿ ನಂ**. 809/2019**

ಹೆಸರುಃ  ಎಸ್ ಆರ್ ವೀರಪ್ಪ                                                                                ಚಾಸಾ**-8**

ತಂದೆಃ  ರಂಗಪ್ಪ                                                                                                  ಪ್ರಾಸಾ-3

ವಯಸ್ಸುಃ  64 ವರ್ಷ

ಉದ್ಯೋಗಃ ನಿವೃತ್ತ ಎ ಎಸ್ ಐ

ವಾಸ ಸ್ಥಳಃ ಮರಬನಹಳ್ಳಿ ಗ್ರಾಮ, ಚನ್ನಗಿರಿ ತಾಃ

ಸಾಕ್ಷಿಗೆ ದಿನಾಂಕಃ 25-03-2026 ರಂದು ಪ್ರಮಾಣ ವಚನ ಭೋಧಿಸಲಾಯಿತು .

(ಭಾ. ದಂ. ಸಂ  . ಪ್ರ. ಕಲಂ 299 ರಡಿಯಲ್ಲಿ ಮುಖ್ಯ ವಿಚಾರಣೆ  )

**ಮುಖ್ಯ ವಿಚಾರಣೆಃ  ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ**

ನಾನು 2018 ರಿಂದ ಮಾರ್ಚ್ 2022 ರವರೆಗೆ  ಎ ಎಸ್  ಐ  ಆಗಿ   ಚನ್ನಗಿರಿ ಪೊಲೀಸ್  ಠಾಣೆಯಲ್ಲಿ  ಕರ್ತವ್ಯ ನಿರ್ವಹಿಸಿರುತ್ತೇನೆ.

ನಾನು ದಿಃ26-08-2019 ರಂದು ಮದಾಹ್ನ 3.30ರ ಸಮಯದಲ್ಲಿ ಠಾಣಾ ಪ್ರಭಾರೆಯಲ್ಲಿದ್ದಾಗ ಚಾಸಾ-1ರವರು ಠಾಣೆಗೆ ಹಾಜರಾಗಿ ನೀಡಿದ ಗಣಕೀಕೃತ ದೂರನುನ ಸ್ವೀಕರಿಸಿ ಠಾಣಾ ಗುನ್ನಾ ನಂ  266/2019 ಕಲಂ 498(ಎ), 504, 323, 506 ರೀತ್ಯ ಪ್ರಕರಣವನ್ನು ದಾಖಲಿಸಿಕೊಂಡು ಪ್ರ ವ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ.

ಸಾಕ್ಷಿ ಕಡತದಲ್ಲಿನ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-14 ಎಂದು ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-14(ಎ) ಎಂದು ಗುರುತಿಸಲಾಯಿತು.

ಸಾಕ್ಷಿ ಕಡತದಲ್ಲಿನ ಪ್ರ ವ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-15 ಎಂದು ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-15(ಎ) ಎಂದು ಗುರುತಿಸಲಾಯಿತು.

ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಚಾಸಾ-7ರವರೊಂದಿಗೆ ಭೇಟಿ ನೀಡಿ ಚಾಸಾ-5 ಮತ್ತು 6 ರವರನ್ನು ಸ್ದಳಕ್ಕೆ ಬರಮಾಡಿಕೊಂಡು ಸದರಿಯವರಿಗೆ ಪ್ರಕರಣದ ವಿದಾಮಾನವನ್ನು ತಿಳಿಸಿ

ಪಂಚರಾಗಿ ಸಹಕರಿಸುವಂತೆಕೋರಿದ್ದು ಸದರಿಯವರುಒಪ್ಪಿದ ಮೇರೆಗೆ ಅವರ ಮೇಲೆ ಪಂಚಾಯತುದಾರರ ನೋಟಿಸನ್ನು ಜಾರಿಮಾಡಿರುತ್ತೇನೆ. ನಂತರ ಚಾಸಾ-1ರವರು ತೋರಿಸಿದ ಸ್ಥಳದಲ್ಲಿ ಪಂಚನಾಮೆಯನ್ನು ಜರುಗಿಸಿದ್ದು ಸದರಿ ಸಮಯಕ್ಕೆ ಚಾಸಾ-1ರವರು ಮದುವೆಯ ಆಮಂತ್ರಣ ಪತ್ರಿಕೆ ಮತ್ತು ಒಂದು ಫೋಟೋವನ್ನು ಹಾಜರುಪಡಿಸಿದ್ದು ಅವುಗಳನ್ನು ತನಿಖೆಗಾಗಿ ಅಮಾನತುಪಡಿಸಿಕೊಂಡಿರುತ್ತೇನೆ. ಸದರಿ ಪಂಚನಾಮೆಯನ್ನು ಸಂಜೆ 5.00 ರಿಂದ 6.00 ರವರೆಗೂ ಜರುಗಿಸಿರುತ್ತೇನೆ. ಸದರಿ ಪಂಚನಾಮೆಗೆ ನಾನು ಸಹಿ ಮಾಡಿದ್ದು, ಚಾಸಾ-1, 5 ಮತ್ತು 6 ರವರ ಸಹಿಯನ್ನು ಪಡೆದಿರುತ್ತೇನೆ.

ಸಾಕ್ಷಿ ಕಡತದಲ್ಲಿನ ಸದರಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-10 ಎಂದು ಗುರುತಿಸಲಾಗಿದ್ಧು ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-10(ಬಿ) ಎಂದು ಗುರುತಿಸಲಾಯಿತು.

ಸದರಿ ಸಮಯಕ್ಕೆ ಚಾಸಾ-1ರವರು ಹಾಜರುಪಡಿಸಿದ ಕಡತದಲ್ಲಿನ ವಿವಾಹದ ಆಮಂತ್ರಣ ಪತ್ರಿಕೆ ಮತ್ತು ಫೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-16 ಮತ್ತು 17 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-16(ಎ) ಮತ್ತು 17(ಎ) ಎಂದು ಗುರುತಿಸಲಾಯಿತು.

ನಿಪಿ-10 ರ ಸಮಯಕ್ಕೆ ಕೃತ್ಯ ನಡೆದ ಸ್ಥಳದ ಕಚ್ಚಾ ನಕಾಶೆಯನ್ನು ತಯಾರಿಸಿರುತ್ತೇನೆ. ಸಾಕ್ಷಿ ಕಡತದಲ್ಲಿನ ಕಚ್ಚಾನಕಾಶೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-11 ಎಂದು ಗುರುತಿಸಲಾಗಿದ್ದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-11(ಬಿ) ಎಂದು ಗುರುತಿಸಲಾಯಿತು. ಸದರಿ ಸಮಯಕ್ಕೆ ಫೋಟೋಗಳನ್ನು ತೆಗೆದಿರುತ್ತೇನೆ. ಸಾಕ್ಷಿ ಕಡತದಲ್ಲಿನ ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-12 ಮತ್ತು 13 ಎಂದು ಗುರುತಿಸಲಾಗಿದೆ.

ನಂತರ ಸಾಕ್ಷಿದಾರರಾದ ಚಾಸಾ-2 ರಿಂದ 4 ರವರಿಗೆ ನೋಟಿಸನ್ನು ಜಾರಿ ಮಾಡಿ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

ನಂತರ ಠಾಣೆಗೆ ಹಿಂದಿರುಗಿ ಅಮಾನತುಪಡಿಸಿಕೊಂಡ ನಿಪಿ-16 ಮತ್ತು 17 ನ್ನು ಠಾಣಾ ಪಿ ಎಫ್ ನಂ 149/2019ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಅರೋಪಿಯಪತ್ತೆಗಾಗಿ ಚಾಸಾ-7ರವರನ್ನುನೇಮಿಸಿದ್ದು

ಸದರಿಯವರು ಚನ್ನಗಿರಿ ಬಸ್ ನಿಲ್ದಾಣದಲ್ಲಿದ್ದ ಸಂತೇರ ಹನುಮಂತಪ್ಪನನ್ನು ನೋಡಿ ಖಚಿತಪಡಿಸಿಕೊಂಡು ಆತನನ್ನು ಠಾಣೆಗೆ ಹಾಜರುಪಡಿಸಿದ ಮೇರೆಗೆ ಆತನ ಮೇಲೆ ದಸ್ತಗಿರಿ ಕ್ರಮ ಅನುಸರಿಸಿ ರಿಮ್ಯಾಂಡ್ ಅರ್ಜಿಯೊಂದಿಗೆ ಸಿಬ್ಬಂದಿಯ ಬೆಂಗಾವಲಿನೊಂದಿಗೆ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ಪ್ರಕರಣದ ತನಿಖೆಯನ್ನು ಪೂರ್ಣಗೊಳಿಸಿ ಆರೋಪಿತನ ಮೇಲೆ ಮೇಲಿನ ಆರೋಪ ಸಾಬೀತಾದ ಮೇರೆಗೆ ದಿಃ 07-09-2019 ರಂದು ದೋಷಾರೋಪಣಾ ಪಟ್ಟಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಆರೋಪಿಯನ್ನುನೋಡಿದರೆ ಗುರುತಿಸುತ್ತೇನೆ.

**ಮರು ವಿಚಾರಣೆ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)** **ಓ.ಹೇ.ಕೇ. ಸರಿ ಇದೆ.**

**01ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆಎಂಎಫ್ ಸಿ, ಚನ್ನಗಿರಿ.**

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ

ನ್ಯಾಯಾಲಯ , ಚನ್ನಗಿರಿ .

ಸಿಸಿ ನಂ**. 809/2019**

ಹೆಸರುಃ ಮಹಮ್ಮದ್ ಉಸ್ಮಾನ್ ಪಿಸಿಡಬ್ಲ್ಯು**-1**

ತಂದೆಃ ಮಹಮ್ಮದ್ ಫಜರುಲ್ಲಾ

ವಯಸ್ಸುಃ 54 ವರ್ಷ

ಉದ್ಯೋಗಃ ಎ ಎಸ್ ಐ ಚನ್ನಗಿರಿ ಪೋ ಠಾಣೆ

ವಾಸ ಸ್ಥಳಃ ದಾವಣಗೆರೆ

ಸಾಕ್ಷಿಗೆ ದಿನಾಂಕಃ 25-06-2025 ರಂದು ಪ್ರಮಾಣ ವಚನ ಭೋಧಿಸಲಾಯಿತು .

(ಭಾ. ದಂ. ಸಂ . ಪ್ರ. ಕಲಂ 299 ರಡಿಯಲ್ಲಿ ಮುಖ್ಯ ವಿಚಾರಣೆ )

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ**

ನಾನು ಕಳೆದ 2ವರೆ ವರ್ಷಗಳಿಂದ ಎ ಎಸ್ ಐ ಆಗಿ ಚನ್ನಗಿರಿ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಪ್ರಸ್ತುತ ಪ್ರಕರಣದಲ್ಲಿ ಸಂತೇರ ಹನುಮಂತಪ್ಪ ಆರೋಪಿಯ ವಿರುದ್ದ ನ್ಯಾಯಾಲಯ ಉದ್ಘೊಷಣೆಯನ್ನು ಹೊರಡಿಸಿದ್ದು,ಅದನ್ನುಪಡೆದು ದಾಗಿನಕಟೆಟ ಗ್ರಾಮಕ್ಕೆ ಹೋಗಿ ಸದರಿ ಗ್ರಾಮದಲ್ಲಿ ಎಲ್ಲಾ ಕಡೆ ಅರೋಪಿ ಪತ್ತೆಗಾಗಿ ಹುಡುಕಾಡಿದ್ದು, ಆರೋಪಿಯ ಇರುವಿಕೆ ಮತ್ತು ವಾಸದ ಕುರಿತು ಯಾವುದೇ ಮಾಹಿತಿ ದೊರೆತಿರುವುದಿಲ್ಲ. ಆದ ಕಾರಣ ಮನು ಮತ್ತು ರಂಗಸ್ವಾಮಿರವರನ್ನು ಬರಮಾಡಿಕೊಂಡು ಪಂಚರಾಗಿ ಸಹಕರಿಸಲು ಕೋರಿ ಸದರಿ ಗ್ರಾಮದ ಆರೋಪಿಯ ತಂದೆಯ ಮನೆಯ ಹತ್ತಿರ ಸ್ಥಳ ಪಂಚನಾಮೆಯನ್ನು ಮದ್ಯಾಹ್ನ 12.00 ರಿಂದ 1.00 ರವರೆಗೆ ಜರುಗಿಸಿರುತ್ತೇನೆ. ನಂತರ ಸದರಿ ಉದ್ಘೋಷಣೆಯನ್ನು ಟಾಂ ಟಾಂ ಹೊರಡಿಸಿ ಅದರ ಪ್ರತಿಯನ್ನು ಗ್ರಾಮ ಪಂಚಾಯತಿಯ ನೋಟಿಸು ಫಲಕಕ್ಕೂ ಮತ್ತು ತಾಲ್ಲೂಕು ಕಚೇರಿಯ ನೋಟಿಸು ಫಲಕಕ್ಕೂ ಅಂಟಿಸಿ ಭಾವಚಿತ್ರಗಳನ್ನು ತೆಗೆದಿರುತ್ತೇನೆ.

ಸಾಕ್ಷಿ ಹಾಜರುಪಡಿಸಿದ ಸದರಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಪಂಚರಿಗೆ ಕೊಟ್ಟ ನೋಟಿಸು ನಿಪಿ-2. ಸದರಿ ಕಾಲಕ್ಕೆ ತೆಗೆದ 3 ಫೋಟೋಗಳನ್ನು ಕ್ರಮವಾಗಿ ನಿಪಿ-3 ರಿಂದ 5 ಎಂದು ಗುರುತಿಸಲಾಯಿತು.

ದಾಗಿನಕಟ್ಟೆಯ ಗ್ರಾಮ ಪಂಚಾಯತಿಗೆ ಹೋಗಿ ಅಲ್ಲಿನ ಪಿ ಡಿ ಓ ರವರನ್ನು ಭೇಟಿ ಮಾಡಿ ಆರೋಪಿಯ ಚರ ಮತ್ತು ಸ್ಥಿರ ಆಸ್ತಿಗಳನ್ನು ಪರಿಶೀಲಿಸಿ ನೀಡುವಂತೆ ಕೋರಿರುತ್ತೇನೆ. ಸದರಿಯವರು ಪರಿಶೀಲಿಸಿ ಆರೋಪಿಯ ಹೆಸರಿನಲ್ಲಿ ಯಾವುದೇ ಚಿರ ಮತ್ತು ಸ್ಥಿರ ಆಸ್ತಿಗಳು ಇಲ್ಲದಿರುವ ಬಗ್ಗೆ ದಿಃ 13-05-2025 ರಂದು ದೃಢೀಕರಣ ಪತ್ರವನ್ನು ನೀಡಿರುತ್ತಾರೆ.

ಸಾಕ್ಷಿ ಸದರಿ ದೃಢೀಕರಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-6 ಎಂದು, ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು.

ನಂತರ ತಾಲ್ಲೂಕು ಕಚೇರಿಗೆ ಭೇಟಿ ನೀಡಿ ಆರೋಪಿಯ ಚರ ಮತ್ತು ಸ್ಥಿರ ಆಸ್ತಿಗಳನ್ನು ಪರಿಶೀಲಿಸಿ ವಿವರವನ್ನು ನೀಡುವಂತೆ ಮನವಿ ನೀಡಿರುತ್ತೇನೆ.

ಸದರಿ ಮನವಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-7 ಎಂದು, ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು.

ಸಾಕ್ಷಿ ಸದರಿ ದೃಢೀಕರಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-8 ಎಂದು, ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು.

ಅದರಂತೆ ಸದರಿ ಅಧಿಕಾರಿ ದಾಖಲೆಗಳನ್ನು ಪರಿಶೀಲಿಸಿ ಸರ್ವೆ ನಂ 42/2 ರಲ್ಲಿ 8 ಎಕರೆ 3 ಗುಂಟೆ 1 ಗುಂಟೆ ಖರಾಬು, ಬುಳನಾಯ್ಕನಹಳ್ಳಿ ಯಲ್ಲಿ ಜಂಟಿಖಾತೆಯಲ್ಲಿರುವ ಕುರಿತು ಮಾಹಿತಿಯನ್ನು ನೀಡಿರುತ್ತಾರೆ. ಸದರಿ ಸಂಗತಿಗಳನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸದರಿಯವರು ನೀಡಿದ ಜಂಟಿ ಖಾತೆಯ ಪಹಣಿ ದಾಖಲೆಗಳನ್ನು ವರದಿಯೊಂದಿಗೆ ಲಗತ್ತಿಸಿರುತ್ತೇನೆ. ಸಾಕ್ಷಿ ಸದರಿ 2024-25 ನೇ ಸಾಲಿನ ಬುಳನಾಯ್ಕನಹಳ್ಳಿ ಗ್ರಾಮದ ಸರ್ವೆ ನಂ 46/2ರಲ್ಲಿರುವ ಆರೋಪಿಯ ಜಂಟಿಖಾತೆಯನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ನಿಪಿ-9 ಎಂದು ಗುರುತಿಸಲಾಯಿತು.

**ಮರು ವಿಚಾರಣೆ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)** **ಓ.ಹೇ.ಕೇ. ಸರಿ ಇದೆ.**

**01ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆಎಂಎಫ್ ಸಿ, ಚನ್ನಗಿರಿ.**